ಅ) ನಗರಕ್ಕೆ ಸರಬರಾಜಾಗುತ್ತಿರುವ ಮೂಲಗಳ ಸಂಖ್ಯೆ ಈ ಕೆಳಕಂಡಂತಿವೆ.

೧	ಹೆಸರುಘಟ್ಟ	೧೫ ದ.ಲ.ಲೀ
೨	ತಿಪ್ಪಗೊಂಡನಹಳ್ಳಿ	೧೩೫ ,,
೩	ಕಾವೇರಿ ೧ ಮತ್ತು ೨ನೇ ಹಂತಗಳಿಂದ	೨೮೦ ,,
	ಒಟ್ಟು	೪೫೦ ದ.ಲ.ಲೀ.

ಆ) ಕಾವೇರಿ ೩ನೇ ಹಂತ ಪೂರ್ಣಗೊಂಡಾಗ ಒಟ್ಟು ದಿನಪ್ರತಿ ೭೦೦ ದಶಲಕ್ಷ ಲೀಟರ್ ನೀರು ಸರಬರಾಜು ಮಾಡಬಹುದಾಗಿದೆ. ಆಗ ನಗರದ ಅಂದಾಜು ಜನಸಂಖ್ಯೆ ೪೭.೫೦ ಲಕ್ಷ ಜನಕ್ಕೆ ದಿನಂ ಪ್ರತಿ ೧೨೪ ದಶಲಕ್ಷ ಲೀಟರು ನೀರಿನ ಅವಶ್ಯಕತೆ ಇರುತ್ತದೆ. ಅದರಂತೆ ೫೪ ದಶಲಕ್ಷ ಲೀಟರು ನೀರಿನ ಕೊರತೆ ಉಂಟಾಗುತ್ತದೆ.

ಈ) ೨೦೦೦ನೇ ಇಸವಿಯ ಹೊತ್ತಿಗೆ ನಗರದ ಅಂದಾಜು ಜನಸಂಖ್ಯೆ ೬೭.೫೫ ಲಕ್ಷ ಇದು ದಿನಂಪ್ರತಿ ೧೭೦೦ ದಶಲಕ್ಷ ಲೀಟರು ನೀರಿನ ಅವಶ್ಯಕತೆ ಇರುತ್ತದೆ.

ಬೆಂಗಳೂರಿನ ಕಲ್ಮಶ ನೀರಿನ ಮರು ಬಳಕೆ

೧೬೭. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೆಂಗಳೂರು ಕಲ್ಮಶ ನೀರನ್ನು ಪುನಃ ಬಳಸಿಕೊಳ್ಳುವ ಬಗ್ಗೆ ಯಾವುದಾದರೂ ಯೋಜನೆ ತಯಾರಾಗಿದೆಯೇ ?

(ಆ) ಹಾಗಿದ್ದಲ್ಲಿ, ಅದರ ರೂಪರೇಷೆಗಳೇನು ?

(ಇ) ಈ ಯೋಜನೆಯಿಂದ ಉಂಟಾಗುವ ಪ್ರಯೋಜನಗಳೇನು ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮಂತ್ರಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

(ಅ) ಬೆಂಗಳೂರಿನ ಕಲ್ಮಶ ನೀರನ್ನು ಪುನಃ ಬಳಸಿಕೊಳ್ಳುವ ಬಗ್ಗೆ, ಬೆಂಗಳೂರು ಜಲ ಮಂಡಳಿಯು, ಕೋರಮಂಗಲ ಮತ್ತು ಚಳ್ಳಘಟ್ಟ ಕಣಿವೆಯ ನಿರ್ಮಲೀಕರಣ ಕೇಂದ್ರದಲ್ಲಿ ತೃತೀಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಯೋಜಿಸಲಾಗಿದೆ.

(ಆ) ತೃತೀಯ ಹಂತದ ಶುದ್ಧೀಕರಣ ಕೋರಮಂಗಲ ಮತ್ತು ಚಳ್ಳಘಟ್ಟ ಕಣಿವೆಯ ನಿರ್ಮಲೀಕರಣ ಕೇಂದ್ರದಲ್ಲಿ ೨ನೇ ಹಂತದ ಶುದ್ಧೀಕರಣ ಕಾರ್ಯಗಳು ಮುಗಿಯುವ ಹಂತದಲ್ಲಿವೆ. ಇದು ಕಾರ್ಯರೂಪಕ್ಕೆ ಬಂದ ಮೇಲೆ, ಈ ಯೋಜನೆಯನ್ನು ಹದಿನೈದು ಕೋಟಿ ರೂ. ವೆಚ್ಚದಲ್ಲಿ ಎರಡು ಅಥವಾ ಮೂರು ವರ್ಷದ ಅವಧಿಯಲ್ಲಿ, ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಲಾಗುವುದು. ಸಂಸ್ಕರಿಸಿದ ನೀರನ್ನು ಹತ್ತಿರದ ಕೈಗಾರಿಕಾ ಪ್ರದೇಶಗಳಿಗೆ ನೀಡಲು ಉದ್ದೇಶಿಸಲಾಗಿದೆ. ಈ ನೀರು ಕುಡಿಯುವ ಹಾಗೂ ಅಡಿಗೆಗೆ ಬಳಸಲು ಬರುವುದಿಲ್ಲ.

(ಇ) ಇದರಿಂದ ನಗರಕ್ಕೆ ಬರುವ ಕುಡಿಯುವ ನೀರಿನ ಪ್ರಮಾಣದ ಮೇಲೆ ಕೈಗಾರಿಕಾ ಬೇಡಿಕೆ ಕಡಿಮೆಯಾಗಲಿದ್ದು, ಇದರಿಂದ ಉಳಿಯುವ ನೀರನ್ನು ಸಾರ್ವಜನಿಕರ ಗೃಹ ಬಳಕೆಗೆ ನೀಡ ಬಹುದಾಗಿದೆ.

ನ್ಯಾಯಾಲಯದಲ್ಲಿರುವ ಬಿ. ಡಿ. ಎ. ಭೂಸ್ವಾಧೀನದ ಪ್ರಕರಣಗಳು

೧೬೮. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡಂ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕೈಗೊಂಡ ಭೂ ಸ್ವಾಧೀನದ ಎಷ್ಟು ಪ್ರಕರಣಗಳು ಹೈಕೋರ್ಟಿನಲ್ಲಿ ಇತ್ಯರ್ಥವಾಗದೆ ಉಳಿದಿದೆ ?